# ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪ್ರದೀಪ ಶೆಟ್ಟರ ರವರು ಮಂಡಿಸಿರುವ ಶೂನ್ಯವೇಳೆ ಸೂಚನೆಗೆ ಉತ್ತರ

**ಪ್ರಶ್ನೆ:** ಹಾವೇರಿ ಜಿಲ್ಲೆ ರಟ್ಟೆಹಳ್ಳಿ ತಾಲ್ಲೂಕಿನ ಮಾಸೂರು ಗ್ರಾಮದ ಯುವತಿಯೊಬ್ಬಳ ಶವ ಹಲಗೇರಿ ಪೊಲೀಸ್ ಠಾಣೆ ವ್ಯಾಪ್ತಿಯ ಪತ್ತೇಪುರ ಹೊಳೆಯಲ್ಲಿ ಇತ್ತೀಚೆಗೆ ಪತ್ತೆಯಾಗಿದ್ದು, ಹಲವು ಸಂಶಯಗಳಿಗೆ ಕಾರಣವಾಗಿ ಪೊಲೀಸರು ಅಪರಿಚಿತ ಶವ ಎಂದು ಘೋಷಿಸಿದ ಪೊಲೀಸರು ತರಾತುರಿಯಲ್ಲಿ ಅಂತ್ಯಕ್ರಿಯೇ ನಡೆಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿವೆ. ಯುವತಿಯ ನಾಪತ್ತೆ ಹಾಗೂ ಸಾವಿನ ಹಿನ್ನೆಯಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ವಿವಿಧ ಪೋಸ್ಟಗಳು ಹರಿದಾಡುತ್ತಿದೆ. ಹಾವೇರಿಯ ಮಾಸೂರಿನಲ್ಲಿ ಮತ್ತೊಂದು ಹಿಂದು ಯುವತಿಯ ಹತ್ಯೆ ಕೊಲೆ ಮಾಡಿ 7 ದಿನಗಳ ಬಳಿಕ ಶವ ಪತ್ತೆ ಈ ಪ್ರಕರಣದಲ್ಲಾದರೂ ನ್ಯಾಯ ಸಿಗುತ್ತಾ ಎಂದು ಪೋಸ್ಟನಲ್ಲಿ ಬರೆಯಲಾಗಿದೆ. ಮಾರ್ಚ್ 6 ರಂದು ಯುವತಿಯ ಶವ ಪತ್ತೆಯಾಗಿದೆ. ಸದರಿ ಪ್ರಕರಣದ ಬಗ್ಗೆ ಕೆಲವು ಆರೋಪಿಗಳನ್ನು ಬಂಧಿಸಿದ್ದು, ಪ್ರಕರಣದ ತನಿಖೆಯ ಹಂತದಲ್ಲಿರುತ್ತದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಸದರಿ ಪ್ರಕರಣವು ಗಂಭೀರವಾದಂತಹ ಪ್ರಕರಣವಾಗಿರುವುದರಿಂದ ಈ ವಿಷಯವನ್ನು ಸರ್ಕಾರವು ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥ ಆರೋಪಿಗಳಿಗೆ ಸೂಕ್ತ ಶಿಕ್ಷೆಯನ್ನು ನೀಡುವಂತಾಗಬೇಕು ಸದರಿ ವಿಷಯದಲ್ಲಿ ಸರ್ಕಾರವು ಯಾವುದೇ ಕಾರಣಕ್ಕೂ, ಆರೋಪಿಗಳ ವಿರುದ್ಧ ತನಿಖೆಯು ದಾರಿ ತಪ್ಪಿಸದ ರೀತಿಯಲ್ಲಿ ನಡೆಸಬೇಕೆಂಬುದರ ಕುರಿತು.

**ಉತ್ತರ** ದಿನಾಂಕ:06.03.2025 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಚಂದ್ರಪ್ಪ ತಂದೆ ನಾಗಪ್ಪ ಹಿತ್ತಲಮನಿ, ವಯಸ್ಸು: 45 ವರ್ಷ ಸಾ: ಪತ್ತೇಪುರ ತಾ: ರಾಣೆಬೆನ್ನೂರು ಇವರು ಹಲಗೇರಿ ಪೊಲೀಸ್ ಠಾಣೆಗೆ ಹಾಜರಾಗಿ ತಮ್ಮ ಲಿಖಿತ ದೂರನ್ನು ನೀಡಿದ್ದು, ದಿನಾಂಕ: 06.03.2025 ರಂದು ಬೆಳಿಗ್ಗೆ 09.30 ಗಂಟೆಗೆ, ಪತ್ತೆಪುರ ಗ್ರಾಮದ ಹದ್ದಿ ಆಂಜನೇಯ ದೇವಸ್ಥಾನದ ಪಕ್ಕದಲ್ಲಿ ಇರುವ ತುಂಗಭದ್ರಾ ನದಿಯ ದಂಡೆಯಲ್ಲಿ, ಸುಮಾರು 25 ರಿಂದ 30 ವರ್ಷ ವಯಸ್ಸಿನ ಅನಾಮಧೇಯ ಮಹಿಳೆಯ ಶವವು ಎಲ್ಲಿಂದಲೋ ತೇಲಿ ಬಂದು ನಿಂತಿದ್ದು, ಸದರಿ ಶವವನ್ನು ನೋಡಲಾಗಿ ಯಾವುದೋ ಅನಾಮಧೇಯ ಮಹಿಳೆಯು ಎಲ್ಲಿಯೋ ಯಾವುದೋ ಕಾರಣಕ್ಕೆ ತುಂಗಭದ್ರಾ ನದಿಗೆ ಬಿದ್ದು ಮರಣ ಹೊಂದಿದ್ದು, ಶವವು ತೇಲುತ್ತಾ ಬಂದು ನಿಂತಿದ್ದು, ಶವದ ಮುಂಗೈ, ಕೈ ಹಾಗೂ ಕಾಲು, ಹೊಟ್ಟೆ ತಲೆ ದೇಹದ ಮೇಲಿನ ಮಾಂಸ ಖಂಡಗಳು ಊದಿಕೊಂಡು ಗುರುತು ಸಿಗದಂತೆ ಇದ್ದು, ಮೈ ಮೇಲೆ ಕೊರಳಲ್ಲಿ ಒಂದು ಕೇಸರಿ ಬಣ್ಣದ ಟವೆಲ್ ಇದ್ದು ಹಾಗೂ ಮೈ ಮೇಲೆ ಒಂದು ಕೆಂಪು ಮತ್ತು ಕಪ್ಪು ಬಣ್ಣದ ವಸ್ತ್ರವನ್ನು ಧರಿಸಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸುತ್ತ ಮುತ್ತ ವಿಚಾರಿಸಲಾಗಿ ಶವದ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ. ಸದರಿ ಶವವನ್ನು ನೋಡಲಾಗಿ ಮೃತಳ ಸಾವಿನಲ್ಲಿ

ಅನುಮಾನವಿದ್ದು ಈ ಬಗ್ಗೆ ಮುಂದಿನ ಕಾನೂನು ಕ್ರಮ ಜರುಗಿಸಿ ಅಂತಾ ನೀಡಿದ ದೂರಿನ ಮೇರೆಗೆ ಹಲಗೇರಿ ಪೊಲೀಸ್ ಠಾಣಾ ಯು.ಡಿ.ಆರ್. ನಂ: 14/2025 ಕಲಂ: 194(3)(iv) ಬಿ.ಎನ್.ಎಸ್.ಎಸ್ 2023 ರೀತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತದೆ.

ನಂತರ ಸದರಿ ಮೃತೆಯ ಶವವನ್ನು ಹಾವೇರಿ ಜಿಲ್ಲಾ ಆಸ್ಪತ್ರೆಯ ಶಿಥಿಲಾಗಾರದಲ್ಲಿ ಶೇಖರಿಸಿ ಇಟ್ಟಿದ್ದು, ವೈದ್ಯಾಧಿಕಾರಿಗಳು ಮೃತಳ ಶವವು ಸಂಪೂರ್ಣವಾಗಿ ಕೊಳೆತ ಸ್ಥಿತಿಯಲ್ಲಿರುವುದರಿಂದ, ಹೆಚ್ಚಿನ ಅವಧಿ ಬಿಟ್ಟರೆ ಶವದ ಮೈ ಮೇಲಿನ ಸಾಕ್ಷ್ಯಗಳು ನಾಶವಾಗುವ ಸಂಭವವಿರುತ್ತದೆ ಅಂತಾ ತಿಳಿಸಿದ್ದರಿಂದ, ದಿನಾಂಕ:07.03.2025 ರಂದು ಮೃತಳ ಶವ ತನಿಖೆ ಕೈಗೊಂಡು ಹಾವೇರಿ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಪಿ.ಎಂ. ಪರೀಕ್ಷೆ ಮಾಡಿಸಿದ್ದು ಇರುತ್ತದೆ. ನಂತರ ವೈದ್ಯಾಧಿಕಾರಿಗಳು ಶವವು ಸಂಪೂರ್ಣ ಕೊಳೆತ ಸ್ಥಿತಿಯಲ್ಲಿದ್ದುದ್ದರಿಂದ ಇದನ್ನು ಇಟ್ಟುಕೊಳ್ಳುವುದು ಸೂಕ್ತವಲ್ಲ, ವಿಲೇವಾರಿ ಮಾಡಿರಿ ಅಂತಾ ಪಿ.ಎಂ ಮಾಡಿದ ಕಾಲಕ್ಕೆ ಮೌಖಿಕವಾಗಿ ತಿಳಿಸಿದ್ದರಿಂದ ದಿನಾಂಕ:07.03.2025 ರಂದು ಶವವನ್ನು ಹಾವೇರಿ ನಗರಸಭೆಯ ಅಧಿಕಾರಿಗಳಿಗೆ ಪತ್ರದ ಮೂಲಕ ವಿನಂತಿಸಿಕೊಂಡು, ಅವರ ಸಿಬ್ಬಂದಿಯಿಂದ ಹಾವೇರಿ ಶಹರದಲ್ಲಿರುವ ಸ್ಮಶಾನದಲ್ಲಿ ಅಂತ್ಯಕ್ರಿಯೆ (ಹೂತಿದ್ದು) ಮಾಡಿಸಿದ್ದು, ಆ ಕಾಲಕ್ಕೆ ಪಂಚನಾಮೆ ಜರುಗಿಸಿರುತ್ತದೆ.

ತನಿಖಾಧಿಕಾರಿಗಳು ದಿನಾಂಕ: 10.03.2025 ರಂದು ವೈದ್ಯಾಧಿಕಾರಿಗಳಿಂದ ಮೃತಳ ಪ್ರಾಥಮಿಕ ಪಿ.ಎಂ. ಪರೀಕ್ಷಾ ವರದಿಯನ್ನು ಪಡೆದುಕೊಂಡು ಪರಿಶೀಲಿಸಲು ಅದರಲ್ಲಿ "Provisional Opinion: Death is due to asphyxia as a result of ligature strangulation" ಅಂತಾ ಅಭಿಪ್ರಾಯ ನೀಡಿದ್ದು ಇರುತ್ತದೆ. ಅದರ ಆಧಾರದ ಮೇಲೆ ಈ ಪ್ರಕರಣದಲ್ಲಿನ ಮೃತಳು ಸುಮಾರು 25-30 ವರ್ಷ ವಯಸ್ಸಿನ ಅನಾಮಧೇಯ ಮಹಿಳೆಯನ್ನು ಯಾರೋ ಯಾವುದೋ ಉದ್ದೇಶಕ್ಕಾಗಿ ಎಲ್ಲಿಯೋ ಕೊಲೆ ಮಾಡಿ ಸಾಕ್ಷಿ ನಾಶ ಮಾಡುವ ಉದ್ದೇಶದಿಂದ ಮೃತಳ ಶವವನ್ನು ಎಲ್ಲಿಯೋ ತುಂಗಭದ್ರಾ ನದಿಯಲ್ಲಿ ತಂದು ಹಾಕಿದ್ದು, ಸದರಿ ಶವವು ತೇಲುತ್ತಾ ದಿನಾಂಕ: 06.03.2025 ರಂದು ಹಲಗೇರಿ ಪೊಲೀಸ್ ಠಾಣಾ ವ್ಯಾಪ್ತಿಯ ಪತ್ತೆಪುರ ಗ್ರಾಮದ ಹತ್ತಿರ ತುಂಗಭದ್ರಾ ನದಿಯಲ್ಲಿ ಬಂದು ನಿಂತಿದ್ದು ಇರುತ್ತದೆ. ಕಾರಣ ಮೇಲ್ಕಂಡ ಸುಮಾರು 25-30 ವರ್ಷ ವಯಸ್ಸಿನ ಅನಾಮಧೇಯ ಮಹಿಳೆಯನ್ನು ಕೊಲೆ ಮಾಡಿದ ದುಷ್ಕರ್ಮಿಗಳ ಮೇಲೆ ದಿನಾಂಕ: 10.03.2025 ರಂದು ಹಲಗೇರಿ ಪೊಲೀಸ್ ಠಾಣಾ ಅಪರಾಧ ಸಂಖ್ಯೆ 56/2025 ಕಲಂ: 103(1), 238(ಎ) ಬಿ.ಎನ್.ಎಸ್-2023 ರ ಪ್ರಕಾರ ಸರ್ಕಾರದ ಪರವಾಗಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತದೆ.

ಸದರಿ ಪ್ರಕರಣದ ತನಿಖೆಯನ್ನು ಮುಂದುವರೆಸಿ, ಮೃತಳ ವಾರಸುದಾರರ ಹಾಗೂ ಆರೋಪಿತರ ಪತ್ತೆ ಕಾರ್ಯ ನಡೆಸಿದ್ದು, ಪ್ರಕರಣದಲ್ಲಿನ ಮೃತಳ ಚಹರೆಪಟ್ಟಿಗೆ ಹೋಲಿಕೆಯಾಗುವಂತಹ ಒಂದು ಮಹಿಳೆ ಕಾಣೆಯ ಪ್ರಕರಣವು ಹಿರೇಕೇರೂರು ಪೊಲೀಸ್ ಠಾಣೆಯಲ್ಲಿ ದಿನಾಂಕ: 07.03.2025 ರಂದು ಅಪರಾಧ ಸಂಖ್ಯೆ: 39/2025 ರಲ್ಲಿ ಮಹಿಳೆ ಕಾಣೆ ಪ್ರಕರಣ ದಾಖಲಾಗಿದ್ದು, ನಂತರ ಹಿರೇಕೇರೂರು ಪೊಲೀಸ್ ಠಾಣೆಗೆ ಸಂಪರ್ಕಿಸಿ ಮಾಹಿತಿ ಪಡೆದುಕೊಂಡಿದ್ದರಲ್ಲಿ, ಮೃತಳ ಹೆಸರು ಸ್ವಾತಿ ತಂದೆ ರಮೇಶ ಬ್ಯಾಡಗಿ, ವಯಸ್ಸು: 20ವರ್ಷ, ರಾಣೆಬೆನ್ನೂರಿನ ಖನ್ನೂರು ನರ್ಸಿಂಗ್ ಹೋಂ ನಲ್ಲಿ ಕೆಲಸ ಸಾ: ಮಾಸೂರು ತಾ: ರಟ್ಟೆಹಳ್ಳಿ ಅಂತಾ ತಿಳಿದು ಬಂದಿದ್ದು ಇರುತ್ತದೆ. ಸದರಿ ಮೃತಳಿಗೆ ಕಾಣೆಯಾದ ಮಹಿಳೆಯ ಚಹರೆಪಟ್ಟಿ ಹೋಲಿಕೆಯಾಗಿದ್ದು ಇರುತ್ತದೆ. ದಿನಾಂಕ: 12.03.2025 ರಂದು ಇದರಲ್ಲಿ ಮೃತಳ ವಾರಸುದಾರರನ್ನು ಪತ್ತೇ ಹಚ್ಚಿ ಅವರಿಗೆ ಮೃತಳ ಪೋಟೋ, ಚಹರೆಪಟ್ಟಿ ಹಾಗೂ ಮೃತಳ ಮೈಮೇಲಿನ ಬಟ್ಟೆಗಳನ್ನು ತೋರಿಸಿದ್ದು, ನೋಡಿ ಗುರುತಿಸಿರುತ್ತಾರೆ. ನಂತರ ಮೃತಳ ಸಂಬಂಧಿಕರನ್ನು ಅಂತ್ಯಕ್ರಿಯೆ ಮಾಡಿದ ಸ್ಥಳಕ್ಕೆ ಕರೆದುಕೊಂಡು ಬಂದು ಅಂತ್ಯಸಂಸ್ಕಾರ ಮಾಡಿದ ಜಾಗವನ್ನು ತೋರಿಸಿದ್ದು, ನಂತರ ಮೃತಳ ಸಂಬಂಧಿಕರು ತಮ್ಮ ಧರ್ಮದ ಪದ್ಧತಿಯ ಪ್ರಕಾರ ಅಂತ್ಯಕ್ರಿಯೆಯ ನಂತರದ ವಿಧಿವಿಧಾನಗಳನ್ನು ಪೂರೈಸಿದ್ದು ಇರುತ್ತದೆ.

ಈ ಪ್ರಕರಣದ ಆರೋಪಿತರ ಪತ್ತೆ ಕುರಿತು ಕ್ರಮ ಕೈಗೊಂಡಿದ್ದು, ಮೃತಳ ಮೊಬೈಲ್ ನಂಬರ್ ಕರೆಗಳನ್ನು ಪರಿಶೀಲಿಸಿ, ಸದರಿಯವಳೊಂದಿಗೆ ಹೆಚ್ಚು ಬಾರಿ ಸಂಪರ್ಕದಲ್ಲಿದ್ದ ನಯಾಜ್ ತಂದೆ ಇಮಾಮ್‌ಸಾಬ್ ಬೆಣ್ಣಿಗೇರಿ, ವಯಸ್ಸು: 28 ವರ್ಷ ಸಾ: ಹಳೆವೀರಾಪುರ ತಾ: ಹಿರೇಕೇರೂರು ಇತನಿಗೆ ದಿನಾಂಕ: 14.03.2025 ರಂದು ವಶಕ್ಕೆ ಪಡೆದುಕೊಂಡು ವಿಚಾರಣೆ ಮಾಡಿದ್ದು, ವಿಚಾರಣೆ ಕಾಲಕ್ಕೆ ನಯಾಜನು ಈಗ ಸುಮಾರು 1 ವರ್ಷದಿಂದ ಮೃತಳೊಂದಿಗೆ ಪರಸ್ಪರ ಪ್ರೀತಿ ಮಾಡುತ್ತಾ ಬಂದಿದ್ದು, ಇತ್ತೀಚೆಗೆ ನಯಾಜನಿಗೆ ಬೇರೆಯವಳೊಂದಿಗೆ ನಿಶ್ಚಿತಾರ್ಥವಾಗಿದ್ದು, ಈ ವಿಷಯ ಸದರಿಯವಳಿಗೆ ಗೊತ್ತಾಗಿ ತನ್ನನ್ನೇ ಮದುವೆಯಾಗಬೇಕೆಂದು ನಯಾಜನಿಗೆ ಪೀಡಿಸುತ್ತಾ ಬಂದಿರುತ್ತಾಳೆ.

ಈ ವಿಚಾರದಲ್ಲಿ ಆರೋಪಿ ನಯಾಜ್‌ನು ಮಹಿಳೆಗೆ ತಿಳಿ ಹೇಳಿದರೂ ಕೂಡಾ, ಕೇಳದೇ ಇದ್ದಾಗ ಮಹಿಳೆಯನ್ನು ದಿನಾಂಕ: 03.03.2025 ರಂದು ಮುಂಜಾನೆ 08.30 ಗಂಟೆಗೆ ರಟ್ಟೆಹಳ್ಳಿಯಿಂದ ಕಾರಿನಲ್ಲಿ ರಾಣೆಬೆನ್ನೂರಿಗೆ ಕರೆದುಕೊಂಡು ಹೋಗಿ ನಂತರ, ತನ್ನ ಸ್ನೇಹಿತರಾದ ದುರ್ಗಾಚಾರಿ ಬಡಿಗೇರ ಹಾಗೂ ವಿನಾಯಕ ಪೂಜಾರ ಸಾ: ಇಬ್ಬರೂ ಮಾಸೂರು ಎನ್ನುವವರನ್ನು ಕರೆಯಿಸಿಕೊಂಡು ಬುದ್ದಿವಾದ ಹೇಳಿದರೂ ಅವಳು ಒಪ್ಪದೇ ಇದ್ದುದರಿಂದ, ಅದೇ ದಿನ ಸಂಜೆ 04.00 ಗಂಟೆ ಸುಮಾರಿಗೆ ರಾಣೆಬೆನ್ನೂರಿನಿಂದ ಕಾರಿನಲ್ಲಿ ಹತ್ತಿಸಿಕೊಂಡು ರಟ್ಟೆಹಳ್ಳಿಗೆ ಕರೆದುಕೊಂಡು ಹೋಗಿ, ಅಲ್ಲಿ ಒಂದು ಹಾಳು ಬಿದ್ದ ಶಾಲೆಯಲ್ಲಿ ಮೂರು ಜನ

ಸೇರಿ ಅವಳಿಗೆ ಹೊಡಿಬಡಿ ಮಾಡಿ ಕೇಸರಿ ಕಲರಿನ ಟವಲನಿಂದ ಅವಳ ಕುತ್ತಿಗೆಗೆ ಹಾಕಿ ಜಗ್ಗಿ ಕೊಲೆ ಮಾಡಿರುತ್ತಾರೆ.

ನಂತರ ಮೂವರು ಆರೋಪಿತರು ಕಾರಿನ ಡಿಕ್ಕಿಯಲ್ಲಿ ಮಹಿಳೆಯ ಶವವನ್ನು ಹಾಕಿಕೊಂಡು ಕೂಸಗಟ್ಟಿ-ನಂದಿಗುಡಿ ಗ್ರಾಮದ ಮಧ್ಯೆ ಇರುವ ತುಂಗಭದ್ರಾ ನದಿಯ ಸೇತುವೆಯ ಮೇಲಿಂದ ಶವವನ್ನು ಹಾಗೂ ಅವಳ ಮೊಬೈಲ್‌ನ್ನು ನದಿಗೆ ಹಾಕಿದ್ದು, ಈ ಪ್ರಕರಣದಲ್ಲಿ ನಯಾಜ್‌ನು ತನ್ನ ಸ್ನೇಹಿತರೊಂದಿಗೆ ಸೇರಿ ಕೊಲೆ ಮಾಡಿರುವುದು ಕಂಡು ಬಂದಿದ್ದರಿಂದ ಆರೋಪಿ ನಯಾಜ್‌ನನ್ನು ದಿನಾಂಕ: 14.03.2025 ರಂದು ದಸ್ತಗಿರಿ ಮಾಡಿ, ಕ್ರಮ ಜರುಗಿಸಿ, ನಂತರ ದಿನಾಂಕ: 15.03.2025 ರಂದು ತನಿಖೆ ಮುಂದುವರೆಸಿ, ಪರಾರಿ ಆರೋಪಿತರಾದ ಆರೋಪಿ-2 ದುರ್ಗಾಚಾರಿ ಬಡಿಗೇರ ಹಾಗೂ ಆರೋಪಿ-3 ವಿನಾಯಕ ಪೂಜಾರ ಇವರನ್ನು ಪತ್ತೆ ಮಾಡಿ, ತನಿಖೆಯನ್ನು ಕೈಗೊಂಡಾಗ ಸದರಿಯವರು ಕೃತ್ಯವನ್ನು ಎಸಗಿರುವ ಬಗ್ಗೆ ಒಪ್ಪಿಕೊಂಡಿದ್ದರಿಂದ ಸದರಿ ಎಲ್ಲ ಆರೋಪಿತರನ್ನು ದಸ್ತಗೀರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ತನಿಖೆ ಮುಂದುವರೆದಿರುತ್ತದೆ.

ಸಂಖ್ಯೆ: ಹೆಚ್‌ಡಿ 46 ಪಿಸಿಕ್ಯೂ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು